# ಕನ್ನಡ ವಿಶ್ವವಿದ್ಯಾಲಯ, ಹಂಪಿ

## ಆಂತರಿಕ ಗುಣಮಟ್ಟ ಭರವಸೆ ಕೋಶ(ಐಕ್ಯುಎಸಿ)

# ಮೂರು ದಿನಗಳ ಎಕ್ಯುಎಆರ್ ತರಬೇತಿ ಕಾರ್ಯಾಗಾರ

**1.4.2023**

"ಎಲ್ಲ ಶೈಕ್ಷಣಿಕ ಸಂಸ್ಥೆಗಳಂತೆ ಕನ್ನಡ ವಿಶ್ವವಿದ್ಯಾಲಯವು ಕೂಡಾ ಪ್ರತಿವರ್ಷ ಆಂತರಿಕ ಗುಣಮಟ್ಟ ಭರವಸೆ ವರದಿ (ಎಕ್ಯುಎಆರ್)ಯನ್ನು ನ್ಯಾಕ್‌ಗೆ ಸಲ್ಲಿಸುವುದು ಕಡ್ಡಾಯ. ವರದಿಯಲ್ಲಿನ ಎಲ್ಲ ಮೆಟ್ರಿಕ್ಸ್‌ಗಳನ್ನು ಪೂರ್ಣಗೊಳಿಸಿದಲ್ಲಿ ಮುಂದಿನ ಆವೃತ್ತಿಯಲ್ಲಿ ವಿಶ್ವವಿದ್ಯಾಲಯವು ಹೆಚ್ಚಿನ ಶ್ರೇಯಾಂಕವನ್ನು ಪಡೆಯಲು ಅನುಕೂಲವಾಗುತ್ತದೆ" ಎಂದು ಕುಲಪತಿ **ಡಾ. ಡಿ.ವಿ. ಪರಮಶಿವಮೂರ್ತಿ ಅವರು** ಹೇಳಿದರು.




ಕನ್ನಡ ವಿಶ್ವವಿದ್ಯಾಲಯದ **ಐಕ್ಯುಎಸಿಯು** ಆಯೋಜಿಸಿದ **ಮೂರು ದಿನಗಳ ಎಕ್ಯುಎಆರ್ ತರಬೇತಿ ಕಾರ್ಯಾಗಾರದ** ಅಧ್ಯಕ್ಷತೆಯನ್ನು ವಹಿಸಿ ಮಾತನಾಡುತ್ತಿದ್ದರು. ಮುಂದುವರೆದು "ವಿಶ್ವವಿದ್ಯಾಲಯದ ಪ್ರತಿಯೊಬ್ಬ ಅಧ್ಯಾಪಕರು ಹಾಗೂ ಅಧಿಕಾರಿಗಳು ತಮ್ಮನ್ನು ತಾವು ಸಂಪೂರ್ಣವಾಗಿ ಈ ಕೆಲಸದಲ್ಲಿ ತೊಡಗಿಸಿಕೊಂಡು ವಿಶ್ವವಿದ್ಯಾಲಯದ ಗುಣಮಟ್ಟ ಹೆಚ್ಚಿಸಬೇಕು" ಎಂದು ಹೇಳಿದರು.

ಈ ಕಾರ್ಯಾಗಾರದಲ್ಲಿ ಬಾಹ್ಯ ಸಂಪನ್ಮೂಲ ವಿದ್ವಾಂಸರಾಗಿ ಹೈದರಾಬಾದಿನ ದಿ ಇಂಗ್ಲಿಷ್ ಅಂಡ್ ಫಾರಿನ್ ಲಾಂಗ್ವೇಜಸ್ ವಿಶ್ವವಿದ್ಯಾಲಯದ ಸಹ ಪ್ರಾಧ್ಯಾಪಕರಾದ **ಡಾ. ವ್ಹಿ.ಬಿ. ತಾರಕೇಶ್ವರ ಅವರು** ಎಲ್ಲ ಕ್ರೈಟೇರಿಯಾಗಳ ವರದಿಗಳನ್ನು ಪಿಪಿಟಿ ಮೂಲಕ ಪರಿಶೀಲಿಸಿ ಇನ್ನಷ್ಟು ಸುಧಾರಣೆಗೊಳಿಸುವ ನಿಟ್ಟಿನಲ್ಲಿ ಸಲಹೆ, ಮಾರ್ಗದರ್ಶನಗಳನ್ನು ನೀಡಿದರು.

ಐಕ್ಯುಎಸಿ ನಿರ್ದೇಶಕರಾದ **ಡಾ. ಎ. ಮೋಹನ ಕುಂಟಾರ್ ಅವರು** ಪ್ರಾಸ್ತಾವಿಕವಾಗಿ ಮಾತನಾಡಿ ಕಾರ್ಯಾಗಾರದ ಸ್ವರೂಪವನ್ನು ವಿವರಿಸಿದರು. ಐಕ್ಯುಎಸಿ ಪದಾಧಿಕಾರಿ ಮಂಡಳಿಯ ಸದಸ್ಯರು ಹಾಗೂ ಕ್ರೈಟೇರಿಯಾಗಳ ಸಂಚಾಲಕರು ಆದಂತಹ ಕುಲಸಚಿವರು, ಪ್ರಾಧ್ಯಾಪಕರು, ಸಹ ಪ್ರಾಧ್ಯಾಪಕರು, ಸಹಾಯಕ ಪ್ರಾಧ್ಯಾಪಕರು ಹಾಗೂ ಅಧಿಕಾರಿಗಳು ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು.




ಕನ್ನಡಪ್ರಭ

ಸೋಮವಾರ 3.4.2023

# ಎಕ್ಯುಎಆರ್ ತರಬೇತಿ ಕಾರ್ಯಾಗಾರ

**ಹೊಸಪೇಟೆ:** ಪ್ರತಿವರ್ಷವೂ ಆಂತರಿಕ ಗುಣಮಟ್ಟ ಭರವಸೆ ವರದಿಯನ್ನು ಕನ್ನಡ ವಿಶ್ವವಿದ್ಯಾಲಯ ನ್ಯಾಕ್‌ಗೆ ಸಲ್ಲಿಸುವುದು ಕಡ್ಡಾಯವಾಗಿದೆ. ವರದಿಯಲ್ಲಿನ ಎಲ್ಲ ಮೆಟ್ರಿಕ್‌ಗಳನ್ನು ಪೂರ್ಣಗೊಳಿಸಿದಲ್ಲಿ ಮಾತ್ರ ಮುಂದಿನ ಆವೃತ್ತಿಯಲ್ಲಿ ವಿಶ್ವವಿದ್ಯಾಲಯವು ಹೆಚ್ಚಿನ ಶ್ರೇಯಾಂಕ ಗಳಿಸಲು ಅನುಕೂಲವಾಗುತ್ತದೆ ಎಂದು ಕುಲಪತಿ ಡಾ. ಡಿ.ವಿ. ಪರಮಶಿವಮೂರ್ತಿ ಹೇಳಿದರು.

ಕನ್ನಡ ವಿಶ್ವವಿದ್ಯಾಲಯದ ಮೂರು ದಿನಗಳ ಎಕ್ಯುಎಆರ್ ತರಬೇತಿ ಕಾರ್ಯಾಗಾರದ ಅಧ್ಯಕ್ಷತೆ ವಹಿಸಿ ಮಾತನಾಡಿ, ವಿಶ್ವವಿದ್ಯಾಲಯದ ಪ್ರತಿಯೊಬ್ಬ ಅಧ್ಯಾಪಕರು ಹಾಗೂ ಅಧಿಕಾರಿಗಳು ತಮ್ಮನ್ನು ತಾವು ಸಂಪೂರ್ಣವಾಗಿ ಈ ಕೆಲಸದಲ್ಲಿ ತೊಡಗಿಸಿಕೊಂಡು ವಿಶ್ವವಿದ್ಯಾಲಯದ ಗುಣಮಟ್ಟ ಹೆಚ್ಚಿಸಬೇಕು ಎಂದರು.

ಹೈದರಾಬಾದಿನ ದಿ ಇಂಗ್ಲಿಷ್ ಅಂಡ್ ಫಾರಿನ್ ಲಾಂಗ್ವೇಜಸ್ ವಿಶ್ವವಿದ್ಯಾಲಯದ ಸಹ ಪ್ರಾಧ್ಯಾಪಕ ಡಾ. ವಿ.ಬಿ. ತಾರಕೇಶ್ವರ ಮಾತನಾಡಿದರು. ಐಕ್ಯುಎಸಿ ನಿರ್ದೇಶಕ ಡಾ. ಎ. ಮೋಹನ ಕುಂಟಾರ್ ಪ್ರಾಸ್ತಾವಿಕವಾಗಿ ಮಾತನಾಡಿ, ಕಾರ್ಯಾಗಾರದ ಸ್ವರೂಪವನ್ನು ವಿವರಿಸಿದರು.